# ಪ್ರಥಮ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
## (ಫ್ರೆಶರ್ಸ್ ಸ್ಕೀಮ್)
## ಕನ್ನಡ ಭಾಷೆ – I
## ಕನ್ನಡ (ಭಾಗ – I) (ಪತ್ರಿಕೆ – I)

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 90

***ಸೂಚನೆ :*** *ಸ್ವಂತ ಆಲೋಚನೆ/ಅನುಭವಗಳ ಹಿನ್ನೆಲೆಯಲ್ಲಿ ಉತ್ತರಿಸುವಾಗ ಪೂರಕ ಪಠ್ಯಗಳನ್ನು ಗಮನದಲ್ಲಿ ಇರಿಸಿಕೊಳ್ಳಿ.*

I. ೧) ಅರ್ಥ ಬರೆಯಿರಿ : **(1×4=4)**

ಹಾವಸೆ, ವಠಾರ, ಚಾಗ, ಕಗ್ಗ.

೨) ನಾನಾರ್ಥಗಳನ್ನು ಬರೆಯಿರಿ : **(1×4=4)**

ತೊರೆ, ಮಾಡು, ಹೊತ್ತು, ಬಟ್ಟೆ.

೩) ಮೂಲ ರೂಪಗಳನ್ನು ಬರೆಯಿರಿ : **(1×4=4)**

ರಾಚ್ಚಸಿ, ಬಿಜ್ಜೆ, ಪರಾಯ, ಕ್ವಾಪ.

೪) ನಾಲ್ಕು ಅನುಕರಣ ವಾಚಕಗಳನ್ನು ಬರೆಯಿರಿ. **(1×4=4)**

೫) ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ : **(1×4=4)**

ಎಳ್ಳಷ್ಟು, ಕಣಕ್ಕೆ ಇಳಿ, ಕಾಲುಕೀಳು, ಕಣ್ಣಿಗೆ ಮಣ್ಣೆರಚು.

೬) ನಾಲ್ಕು ಜೋಡಿ ಪದಗಳನ್ನು ಬರೆಯಿರಿ. **(1×4=4)**

೭) ಈ ಗಾದೆ ಮಾತುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ : **(2×3=6)**

ಅ) ಪಾಲಿಗೆ ಬಂದದ್ದೇ ಪಂಚಾಮೃತ.

ಆ) ಹಾಸಿಗೆ ಇದ್ದಷ್ಟು ಕಾಲುಚಾಚು.

II. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : (4×5=20)

1) ಶ್ರಾವಣ ಕವಿತೆಯಲ್ಲಿ ಬೇಂದ್ರೆಯವರು ನಿಸರ್ಗವನ್ನು ಕಂಡಿರುವ ಬಗೆ ಹೇಗೆ ?

2) ಯಂತ್ರ – ಪರಿಸರ ಈ ಅಂಶಗಳನ್ನು 'ಮಿಲ್ಲು ಮತ್ತು ಹಕ್ಕಿ' ಹೇಗೆ ಒಳಗೊಂಡಿದೆ ?

3) ''ಮಂಗಮ್ಮ ಬದುಕಿನ ಉತ್ಸಾಹಕ್ಕೆ ಪ್ರೇರಣೆಯಾಗಿದ್ದಾಳೆ'' ಹೇಗೆ ?

4) ಮಾನಸಿಕವಾಗಿ ಲಂಕೇಶರಿಗೆ 'ಆ ಒಂದು ದಿನ' ಬಿಡುವನ್ನು ನೀಡಿತೆ ?

5) ಮುದ್ದಣನು ಸಂಸ್ಕೃತ ಬಳಸಿದ ಪರಿಣಾಮವೇನಾಯಿತು ?

6) ಮನುಷ್ಯ ಮತ್ತು ನಿಸರ್ಗದ ಸಂಬಂಧ ಹೇಗಿರಬೇಕೆಂದು ನೀವು ಬಯಸುತ್ತೀರಿ ?

III. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (4×5=20)

1) 'ಯಾರು ನೀ' ಕವಿತೆಯ ಆಶಯವೇನು ? ತಿಳಿಸಿ.

2) ಶಶಿಯ ಬಂಜೆತನಕ್ಕೆ ಸಮಾಜದ ಪ್ರತಿಕ್ರಿಯೆ ಏನು ?

3) ಜನಪದ ಬದುಕಿನ ಕ್ರಮ ಆಧುನಿಕ ಬದುಕಿಗೆ ಮಾದರಿಯೆ ?

4) ಜೈವಿಕ ಬೆಳವಣಿಗೆ ಎಂದರೇನು ?

5) ಕುವೆಂಪು ಕನ್ನಡ ಕವಿ ಹೇಗಾದರು ?

6) ಆಧುನಿಕ ಪ್ರಗತಿಯನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ ?

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ / ಅನುಭವಗಳ ಹಿನ್ನೆಲೆಯಲ್ಲಿ ಉತ್ತರಿಸಿ. (2×10=20)

1) ನಗರ ಜೀವನದ ಸ್ವರೂಪವನ್ನು 'ತಿರುವನಂತಪುರ' ಕವಿತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

2) ಭಾಷೆ ಮತ್ತು ಅದರ ಅವಸಾನ ಕುರಿತು ಕೆ.ವಿ. ನಾರಾಯಣ ಅವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಿಮ್ಮ ಆಲೋಚನೆಗಳೇನು ?

3) ಪಂಪ ಹಾಗೂ ಮನೋರಮೆಯರ ಕನ್ನಡನಾಡು ನುಡಿಯ ಬಗೆಗಿನ ಭಾವನೆಗಳೇನು ?

4) 'ಮೊಸರಿನ ಮಂಗಮ್ಮ'ನ ಕಥೆಯ ಹಿನ್ನೆಲೆಯಲ್ಲಿ ಪ್ರೀತಿಯಲ್ಲಿನ ಜಗಳ ಜಗಳದಲ್ಲಿನ ಪ್ರೀತಿ ಇವು ವ್ಯಕ್ತಗೊಂಡಿರುವ ಕ್ರಮ ಯಾವುದು ?

# ಪ್ರಥಮ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
## (ರಿಪೀಟರ್ಸ್ ಸ್ಕೀಂ)
## ಕನ್ನಡ ಭಾಷೆ
## (ಭಾಗ – ೧) (ಭಾಷೆ – ೧) (ಪತ್ರಿಕೆ – ೧)
## ರಥ ಸಪ್ತಮಿ, ಪ್ರಾಚೀನ ಕಾವ್ಯದರ್ಶನ – ೧ ಮತ್ತು ಇತರ ಚಿತ್ರಗಳು

ಸಮಯ : 3 ಗಂಟೆಗಳು                                                                                     ಗರಿಷ್ಠ ಅಂಕಗಳು : 90

I. ಅ) ಈ ಪದ್ಯಗಳಲ್ಲಿ **ಒಂದಕ್ಕೆ** ಭಾವಾರ್ಥವನ್ನು ಬರೆಯಿರಿ : **(1×5=5)**

1) ಕುರುನಂದನರಂ ಕೊಂದೆಂ
ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂ
ಣ್ದೆರಡಂ ತೀರ್ಚಿದೆನಿರ್ದಪು
ವೆರಡುಮವಂ ತೀರ್ಚಿ ತೀರ್ಚಿದಿರ್ಪೆನೆ ಪಗೆಯಂ ॥

2) ಎನ್ನ ಮಾಯದ ಮದವ ಮುರಿಯಯ್ಯ ।
ಎನ್ನ ಕಾಯದ ಕಳವಳವ ಕೆಡಿಸಯ್ಯ ।
ಎನ್ನ ಜೀವದ ಜಂಜಡವ ಬಿಡಿಸಯ್ಯ ।
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ
ಎನ್ನ ಸುತ್ತಿದ ಮಾಯಾ ಪ್ರಪಂಚವ ಬಿಡಿಸಾ ನಿಮ್ಮ ಧರ್ಮ ।

ಆ) **ಎರಡನ್ನು** ಸಂದರ್ಭಸಹಿತ ವಿವರಿಸಿ : **(2×3=6)**

1) ನೀನಗ್ನಿ ಪುತ್ರಿಯಯ್
2) ಮಗ ಮುನಿದೆಡೆ ತಂದೆ ಮುನಿಯನು
3) ಮೆಚ್ಚಿದೆ ಮಗನೆ ಬೇಡೊಲಿದುದನು
4) ಹಲ್ಲಿಲ್ಲದ ಮುದುಕಮ್ಮ ನಾ ಹೇಗೆ ಒಣರೊಟ್ಟಿ ತಿನ್ನಲಿ.

ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×2=4)**

1) ಪಂಪ    2) ಜಾನಪದ    3) ರಾಘವಾಂಕ    4) ವಿದೂಷಕ

ಈ) ಹೊಸಗನ್ನಡಕ್ಕೆ ಪರಿವರ್ತಿಸಿ : **(1×5=5)**

ಅತ್ತ ದುರ್ಯೋಧನಂ ಸಹಸ್ರ ಕಿರಣೋದಯದೊಳನೇಕ ಸಹಸ್ರ ನರಪತಿ ಪರಿವೃತನುಮಾಗಿ ಮಂದಾಕಿನೀ ತನೂಜಂಗೆ ಬಟೆಯನಟ್ಟಿ ಬರಿಸಿ ಮಣಿಮಯ ಪೀಠದೊಳ್ ಕುಳ್ಳಿರಿಸಿ ದೇವಾಸುರ ಯುದ್ಧದೊಳ್ ಗುಹಂಗೆ ವೀರಪಟ್ಟಮಂ ಕಟ್ಟುವ ಪುರಂದರನಂದಮನೆ ಪೋಲ್ತು.

II. ನಾಲ್ಕಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ದುರ್ವಾಸರು ಪಾಂಡವರನ್ನು ಪರೀಕ್ಷಿಸಲು ಬಂದ ಕಾರಣವೇನು ?
2) ಕರ್ಣನನ್ನು ದ್ರೋಣರು ನಿಂದಿಸಲು ಕಾರಣವೇನು ?
3) ಗುರುವಿನ ಗುಲಾಮನಾಗಬೇಕೆಂದು ಪುರಂದರದಾಸರು ಏಕೆ ಹೇಳುತ್ತಾರೆ ?
4) ಹರಿಯ ದರುಶನಕ್ಕಾಗಿ ಬಂದ ನಾರದರಿಗೆ ಕಂಡ ಅಪೂರ್ವ ದೃಶ್ಯ ಯಾವುದು ?
5) ದ್ರೌಪದಿಯ ಕೃಷ್ಣಭಕ್ತಿ ಹೇಗೆ ವ್ಯಕ್ತವಾಗಿದೆ ?
6) ಹಡೆದವ್ವನನ್ನು ಮಡುವಿಗೆ ಎಸೆಯಲು ಕಾರಣವಾದ ಸಂಗತಿಗಳು ಯಾವುವು ?
7) 'ಆವ ಸಿರಿಯಲಿ ನೀನು ಎನ್ನ ಮರೆತೆ' ಎಂದು ಭಗವಂತನನ್ನು ಕನಕದಾಸರು ಏಕೆ ಪ್ರಶ್ನಿಸುತ್ತಾರೆ ?

III. **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) 'ಸೂಟ್ಟಿಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎಂಬ ಕಾವ್ಯಭಾಗದಲ್ಲಿ ಚಿತ್ರಿತವಾಗಿರುವ ಭೀಷ್ಮರ ವ್ಯಕ್ತಿತ್ವವನ್ನು ಚಿತ್ರಿಸಿ.
2) ಪುರಂದರದಾಸರು ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಿರುವ ಔಚಿತ್ಯವೇನು ?
3) ದ್ರೌಪದಿಯ ಸಂಶಯಕ್ಕೆ ಭೀಮಸೇನ ಆತ್ಮಾವಲೋಕನ ಮಾಡಿಕೊಳ್ಳುವ ಕ್ರಮವನ್ನು ವಿಶ್ಲೇಷಿಸಿ.
4) ದುರ್ವಾಸರಿಗೆ ದುರ್ಯೋಧನ ನೀಡಿದ ಆತಿಥ್ಯವನ್ನು ವಿವರಿಸಿ.
5) ಹಡೆದವ್ವನ ಸಂಕಟದ ಸ್ವರೂಪವನ್ನು ವಿಚಾರ ಮಾಡಿ.

IV. ಐದು ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (5×1=5)

1) ಆಟದ ತೊಟ್ಟಿಲನ್ನು ಯಾವ ಚಪ್ಪರಕ್ಕೆ ಹಣ್ಣಿನಂತೆ ಕಟ್ಟಿ ತೂಗುಬಿಟ್ಟಿದ್ದರು ?
2) ಪು.ತಿ.ನ. ಇದು ಯಾರ ಕಾವ್ಯನಾಮ ?
3) ಸೂರ್ಯಮಂಡಲ ವಾಹನಕ್ಕೆ ಇರುವ ಅಶ್ವಗಳು ಎಷ್ಟು ?
4) ಚಲುವರಾಯನ ಮುಂದೆ ಕೊಂಬನ್ನು ಊದುತ್ತಿದ್ದವರು ಯಾರು ?
5) ವಿಪ್ರರ ಯಾವ ಕಾರ್ಯ ವಿಜ್ಞಾನಿಗಳಿಗೆ ಅಜ್ಞಾನವೆಂದು ತೋರುತ್ತದೆ ?
6) ಶೇಷಮ್ಮನವರಿಗೆ ಪೀತಾಂಬರವನ್ನು ಕೊಟ್ಟವರು ಯಾರು ?
7) ಬೀದಿ ಬಸವನನ್ನು ಯಾರ ವಂಶದವರೆಂದು ನಿರೂಪಕ ಹೊಗಳುತ್ತಾರೆ ?

V. **ಒಂದು** ವಿಷಯದ ಬಗ್ಗೆ ಟಿಪ್ಪಣಿ ಬರೆಯಿರಿ : (1×5=5)

1) ಬಸವ ಕಾಲೆಯ ರಾಮನಾಗಿದ್ದು
2) ಯದುಗಿರಿಯಲ್ಲಿ ಪುರಮಹಿಳೆಯರು ರಂಗವಲ್ಲಿಯನ್ನಿಡುವ ದೃಶ್ಯ.

VI. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : (2×10=20)

1) ಕೊಳದ ತಡಿಯಲ್ಲಿ ನಿರೂಪಕ ದೇವಕಿಶೋರಿಯನ್ನು ಭೇಟಿಯಾದ ಸಂದರ್ಭ.
2) ಚಲುವರಾಯ ವೈಲ್‌ಮಾಳಿಗೆಗೆ ರಹಸ್ಯವಾಗಿ ಹೊರಡುವ ಸಂದರ್ಭ.
3) ಶೇಷಮ್ಮನವರ ಪೀತಾಂಬರ ಪ್ರಸಂಗ ಮತ್ತು ನಿರೂಪಕನಿಗೆ ಅದರಿಂದ ಆದ ಅನುಭವ.
4) ನೌಕಾಚಂದ್ರ ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ.

---